# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1093** |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | **16-12-2025** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ ಒಂದು ಜಿಲ್ಲೆ, ಒಂದು ಉತ್ಪನ್ನ(ODOP) ಯೋಜನೆಯಡಿಯಲ್ಲಿ ರಾಜ್ಯವು ಈವರೆಗೆ ಎಷ್ಟು ಉತ್ಪನ್ನಗಳನ್ನು ಗುರುತಿಸಲಾಗಿದೆ. | ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯ ಅನ್ವಯ 31 ಜಿಲ್ಲೆಗಳಲ್ಲಿ ಉತ್ಪನ್ನಗಳನ್ನು ಗುರುತಿಸಲಾಗಿದೆ: ಜಿಲ್ಲಾವಾರು ವಿವರವನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ |
| ಆ) | ಉತ್ಪನ್ನಗಳ ರಫ್ತುಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೇಂದ್ರವು ರಾಜ್ಯಕ್ಕೆ ಅಗತ್ಯ ನೆರವು ನೀಡಲು ಯೋಜನೆಯನ್ನು ರೂಪಿಸಿದೆಯೇ; (ವಿವರ ನೀಡುವುದು) | ➢ ಭಾರತ ಸರ್ಕಾರವು "ಆತ್ಮ ನಿರ್ಭರ ಭಾರತ" ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2021-22 ಸಾಲಿನಿಂದ "ಒಂದು ಜಿಲ್ಲೆ ಒಂದು ಉತ್ಪನ್ನ (One District One Product (ODOP))" ಎಂಬ ಯೋಜನೆಯನ್ನು ಜಾರಿಗೊಳಿಸಿದೆ. ಇದೇ ಮಾದರಿಯಲ್ಲಿ ರಾಜ್ಯ ಸರ್ಕಾರವು ಸರ್ಕಾರದ ವತಿಯಿಂದ "ಒಂದು ಜಿಲ್ಲೆ ಒಂದು ಉತ್ಪನ್ನ " ರಡಿ ರಾಜ್ಯದ ವಿವಿಧ ಜಿಲ್ಲೆಗಳ ಸ್ಥಳೀಯ ಸಾಂಪ್ರದಾಯಿಕ ಕೃಷಿಯೇತರ ಎಂ.ಎಸ್.ಎಂ.ಇ ಉತ್ಪನ್ನಗಳಿಗೆ ವಿಶೇಷ ಪ್ರೋತ್ಸಾಹ ಮತ್ತು ಬ್ರಾಂಡಿಂಗ್ ನೆರವು ಒದಗಿಸುವುದರಿಂದ ಸ್ಥಳೀಯ ಆರ್ಥಿಕತೆಗೆ ಉತ್ತೇಜನ ದೊರಕುವುದರೊಂದಿಗೆ ಉದ್ಯೋಗಾವಕಾಶ ಸೃಷ್ಟಿಸಲಿದೆ.<br>➢ ODOP ಉತ್ಪನ್ನಗಳ ರಫ್ತುಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ವಿಟಿಪಿಸಿ ಸಂಸ್ಥೆಯು ಕೇಂದ್ರ ಸರ್ಕಾರದ ಯಾವುದೇ ನೆರವು ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿಲ್ಲ. |
| ಇ) | ಈ ರಫ್ತುಗಳನ್ನು ಉತ್ತೇಜಿಸಲು ತೆರಿಗೆ ವಿನಾಯಿತಿ ಅವಕಾಶ ಮಾಡಿಕೊಟ್ಟದೆಯೇ? ಹಾಗಿದ್ದಲ್ಲಿ, (ವಿವರ ಒದಗಿಸುವುದು): | ➢ ಈ ಯೋಜನೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಹಾಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸಂಯೋಜನೆಯೊಂದಿಗೆ ಕ್ಲಸ್ಟರ್ ಅಭಿವೃದ್ಧಿ ಕಾರ್ಯಕ್ರಮಗಳು, ಹೊಸ ವಿನ್ಯಾಸ, ತರಬೇತಿ, ತಂತ್ರಜ್ಞಾನ ಅಳವಡಿಕೆ, ಜಾಗೃತಿ ಶಿಬಿರಗಳು, ಗುಣಮಟ್ಟ ಸುಧಾರಣೆ, ಉತ್ಪಾದನೆ ಹೆಚ್ಚಳ, Product Catalogue, ಉಡುಗೊರೆ, ಮಾರುಕಟ್ಟೆ ಸೌಲಭ್ಯ, ಇ-ಕಾಮರ್ಸ್, ಪಾರಂಪರಿಕ ಉತ್ಪನ್ನಗಳ ಕುಶಲಕರ್ಮಿಗಳಿಗೆ ಪ್ರೋತ್ಸಾಹ/ತರಬೇತಿ ಹಾಗೂ ಇನ್ನಿತರೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

| | | |
|---|---|---|
| | | ➢ ಎಲ್ಲಾ ಸಂಬಂಧಪಟ್ಟ ಇಲಾಖೆ/ನಿಗಮ/ಮಂಡಳಿಗಳು ತಮ್ಮ ಕಾರ್ಯಕ್ರಮಗಳನ್ನು ಈ ಯೋಜನೆಯಲ್ಲಿ ಸಂಯೋಜನೆ ಮಾಡಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.<br>➢ ODOP ರಫ್ತುಗಳನ್ನು ಉತ್ತೇಜಿಸಲು ವಿಟಿಪಿಸಿ ಸಂಸ್ಥೆಯಿಂದ ಯಾವುದೇ ಯೋಜನೆಯಡಿ ತೆರಿಗೆ ವಿನಾಯಿತಿ ನೀಡುತ್ತಿಲ್ಲ. |

**ಸಿಐ 184 ಎಸ್‌ಎಸ್‌ಐ 2025**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು.

**ಅನುಬಂಧ -1**

## ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯ ಜಿಲ್ಲಾವಾರು ಉತ್ಪನ್ನಗಳ ಪಟ್ಟಿ

| ಕ್ರ.ಸಂ | ಜಿಲ್ಲೆ | ಉತ್ಪನ್ನ |
|---|---|---|
| 1 | ಉಡುಪಿ | ರತ್ನಗಳು ಮತ್ತು ಆಭರಣ ತಯಾರಿಕೆ |
| 2 | ಮೈಸೂರು | ರೋಸ್‌ವುಡ್ ಕೆತ್ತನೆ |
| 3 | ಬೀದರ್ | ಬಿದರಿ ಕಲೆ |
| 4 | ವಿಜಯಪುರ | ವ್ಯವಸಾಯ ಸಾಮಗ್ರಿಗಳು |
| 5 | ಬಾಗಲಕೋಟೆ | ಇಳಕಲ್ ಸೀರೆ |
| 6 | ದಾವಣಗೆರೆ | ಹತ್ತಿ ಆಧಾರಿತ Ginning ಮತ್ತು ಸಿದ್ಧ ಉಡುಪು ತಯಾರಿಕೆ |
| 7 | ತುಮಕೂರು | ತೆಂಗಿನ ನಾರಿನ ಕೈಗಾರಿಕೆಗಳು |
| 8 | ಹಾವೇರಿ | ಮಸಾಲೆ ಪದಾರ್ಥಗಳು |
| 9 | ಚಾಮರಾಜನಗರ | ಕಲ್ಲಿನ ಕೆತ್ತನೆ |
| 10 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ ರೇಷ್ಮೆ ಮತ್ತು ಕಚ್ಚಾ ರೇಷ್ಮೆ ಆಧಾರಿತ ಸೀರೆಗಳು |
| 11 | ಚಿತ್ರದುರ್ಗ | ಮೊಳಕಾಲ್ಮೂರು ಸೀರೆಗಳು |
| 12 | ಕೋಲಾರ | ಶಿವಾರಪಟ್ಟಣ ಕಲ್ಲು ಕೆತ್ತನೆ |
| 13 | ಬಳ್ಳಾರಿ | ಬಳ್ಳಾರಿ ಡೆನಿಮ್ ಜೀನ್ಸ್ |
| 14 | ಶಿವಮೊಗ್ಗ | ಸಿದ್ಧ ಉಡುಪು ತಯಾರಿಕೆ |
| 15 | ಕೊಡಗು | ಮನೆಯಲ್ಲಿ ತಯಾರಿಸಿದ ಚಾಕೋಲೇಟ್/ವೈನ್ಸ್ |
| 16 | ಉತ್ತರ ಕನ್ನಡ | ಆಯುರ್ವೇದ ಔಷಧ ಉತ್ಪನ್ನಗಳು |
| 17 | ಬೆಳಗಾವಿ | ಫೌಂಡ್ರಿ |
| 18 | ಹಾಸನ | ಜಕಾರ್ಡ್ ಬೆಡ್‌ಶೀಟ್ |
| 19 | ಬೆಂಗಳೂರು ಗ್ರಾಮಾಂತರ | ಸಿದ್ಧ ಉಡುಪು ತಯಾರಿಕೆ |
| 20 | ಧಾರವಾಡ | ಹಾಲ್ಕ ಉತ್ಪಾದನೆ |
| 21 | ರಾಮನಗರ | ಚನ್ನಪಟ್ಟಣ ಗೊಂಬೆ ತಯಾರಿಕೆ |
| 22 | ಯಾದಗಿರಿ | ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು |
| 23 | ಚಿಕ್ಕಮಗಳೂರು | ಅಡಿಕೆ ಎಲೆ ಆಧಾರಿತ ಉತ್ಪನ್ನಗಳು (ತಟ್ಟೆ, ಲೋಟ ಇತ್ಯಾದಿ) |
| 24 | ಕಲಬುರಗಿ | ಶಹಾಬಾದ್ ಕಲ್ಲುಗಳು |
| 25 | ಕೊಪ್ಪಳ | ಕಿನ್ನಾಳ ಗೊಂಬೆ ತಯಾರಿಕೆ |
| 26 | ರಾಯಚೂರು | ಹತ್ತಿ ಮತ್ತು ಹತ್ತಿ ಆಧಾರಿತ ಉತ್ಪನ್ನಗಳು |
| 27 | ದಕ್ಷಿಣ ಕನ್ನಡ | ಜವಳಿ ಸಂಸ್ಕರಣೆ |
| 28 | ಬೆಂಗಳೂರು ನಗರ | ಕೈಮಗ್ಗ ಆಧಾರಿತ ರೇಷ್ಮೆ ಸೀರೆ |
| 29 | ಗದಗ | ಜವಳಿ |
| 30 | ಮಂಡ್ಯ | ಅಕ್ಕಿ ಆಧಾರಿತ ಉತ್ಪನ್ನಗಳು |
| 31 | ವಿಜಯನಗರ | ಸಂಡೂರು ಲಂಬಾಣಿ ಕಸೂತಿ |